**<u>ಮಾನ್ಯ ವಿಧಾನ ಪರಿಷತ್ತ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ರವರ ಶೂನ್ಯ ವೇಳೆ ಪ್ರಸ್ತಾವನೆ ಮೇಲಿನ ಹೇಳಿಕೆ</u>**

**ಪ್ರಶ್ನೆ: "ಮಳೆಗಾಲ ಮುಗಿದರೂ ಪ್ರಾರಂಭವಾಗದ ಕಾಮಗಾರಿ ! ಉಭಯ ಜಿಲ್ಲೆಯ ಯಾವ ಭಾಗದಲ್ಲೂ ಮನೆ ನಲ್ಲಿಗೆ ತಲುಪದ "ಜಲ". ಜಲ ಜೀವನ್ ಮಿಷನ್ ಗೆ ಜೀವ ಬರುವುದು ಯಾವಾಗ?" ಎಂಬ ಶೀರ್ಷಿಕೆಯಡಿ ದಿನಾಂಕ 07/12/2024 ರ ಉದಯವಾಣಿ ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.**

*****

**<u>ಹೇಳಿಕೆ:</u>**

"ಜಲ ಜೀವನ್ ಮಿಷನ್" ಯೋಜನೆಯನ್ನು ಆಗಸ್ಟ್-2019ರಂದು ಕೇಂದ್ರ ಸರ್ಕಾರವು ಜಾರಿಗೆ ತಂದಿರುತ್ತದೆ. ಈ ಯೋಜನೆಯ ಮೂಲ ಉದ್ದೇಶವು-ದೇಶದ ಪ್ರತಿ ಗ್ರಾಮೀಣ ಮನೆಗಳಿಗೆ 2024ರ ಒಳಗಾಗಿ ಗುಣಮಟ್ಟದ ನೀರನ್ನು ತಲಾ 55 LPCD ಯಂತೆ ಕಾರ್ಯಾತ್ಮಕ ನಳ ಸಂಪರ್ಕದ ಮೂಲಕ ಒದಗಿಸುವುದಾಗಿರುತ್ತದೆ. ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆಯಾದ ಜಲ ಜೀವನ್ ಮಿಷನ್ ಯೋಜನೆಯಡಿ "ಮನೆ ಮನೆಗೆ ಗಂಗೆ" ಯೋಜನೆಯನ್ನು ರಾಜ್ಯ ಸರ್ಕಾರವು ಜಾರಿಗೆ ತಂದಿರುತ್ತದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ JJM ಯೋಜನೆಯಡಿ ಕೈಗೆತ್ತಿಕೊಳ್ಳಲಾದ ಬಹುಗ್ರಾಮ ಕುಡಿಯುವ ನೀರು ಯೋಜನೆ (MVS) ಮತ್ತು ಏಕ ಗ್ರಾಮ ಕುಡಿಯುವ ನೀರಿನ ಯೋಜನೆಗಳ (SVS) ವಿವರ, ಕಾರ್ಯಾತ್ಮಕ ನಳ ನೀರು ಸಂಪರ್ಕಗಳ (FHTC) ವಿವರ, ಅಂದಾಜು ಮೊತ್ತದ ವಿವರ ಹಾಗೂ Road Restoration ಗಳ ವಿವರಗಳು ಈ ಕೆಳಕಂಡಂತಿರುತ್ತವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 7 MVS ಕಾಮಗಾರಿಗಳು ಮತ್ತು 700 SVS ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಒಟ್ಟು 707 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಈ ಪೈಕಿ ಪೂರ್ಣಗೊಳಿಸಲಾದ ಕಾಮಗಾರಿಗಳ ಸಂಖ್ಯೆಯು 552 ಆಗಿದ್ದು, ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆಯು 155 ಆಗಿರುತ್ತದೆ. ಈ ಕಾಮಗಾರಿಗಳಡಿ ಒಟ್ಟಾರೆ ಭೌತಿಕ ಗುರಿ (FHTC) 3,34,185 ಆಗಿದ್ದು, ಈ ಪೈಕಿ ಸಾಧಿಸಿದ ಗುರಿ (FHTC) 2,94,412 ಆಗಿರುತ್ತದೆ. ಸದರಿ ಕಾಮಗಾರಿಗಳಿಗೆ ಒಟ್ಟು ಅನುಮೋದಿತ ಅಂದಾಜು ಮೊತ್ತವು ರೂ. 2,616.08 ಕೋಟಿಗಳಾಗಿದ್ದು, ಈ ಪೈಕಿ ರೂ.881.30 ಕೋಟಿಗಳ ವೆಚ್ಚವಾಗಿರುತ್ತದೆ. ಸದರಿ ಕಾಮಗಾರಿಗಳಿಗೆ ಒಟ್ಟಾರೆ 4,288 ಕಿ.ಮೀ. ಉದ್ದದಲ್ಲಿ ರಸ್ತೆ ಪುನಃಸ್ಥಾಪನೆ ಮಾಡಬೇಕಾಗಿದ್ದು, ಈ ಪೈಕಿ 3,190 ಕಿ.ಮೀ. ಉದ್ದವನ್ನು ಸಾಧಿಸಲಾಗಿದ್ದು, ಬಾಕಿ 1,098 ಕಿ.ಮೀ. ಉದ್ದದಲ್ಲಿ ಪುನಃಸ್ಥಾಪನೆ ಮಾಡಬೇಕಾಗಿರುತ್ತದೆ.

ಉಡುಪಿ ಜಿಲ್ಲೆಯಲ್ಲಿ 2 MVS ಕಾಮಗಾರಿಗಳು ಮತ್ತು 524 SVS ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಒಟ್ಟು 526 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಈ ಪೈಕಿ ಪೂರ್ಣಗೊಳಿಸಲಾದ ಕಾಮಗಾರಿಗಳ ಸಂಖ್ಯೆಯು 458 ಆಗಿದ್ದು, ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆಯು 68 ಆಗಿರುತ್ತದೆ. ಈ ಕಾಮಗಾರಿಗಳಡಿ ಒಟ್ಟಾರೆ ಭೌತಿಕ ಗುರಿ (FHTC) 2,47,190 ಆಗಿದ್ದು, ಈ ಪೈಕಿ ಸಾಧಿಸಿದ ಗುರಿ (FHTC) 2,05,824 ಆಗಿರುತ್ತದೆ. ಸದರಿ ಕಾಮಗಾರಿಗಳಿಗೆ ಒಟ್ಟು ಅನುಮೋದಿತ ಅಂದಾಜು ಮೊತ್ತವು ರೂ. 2,925.80 ಕೋಟಿಗಳಾಗಿದ್ದು, ಈ ಪೈಕಿ ರೂ.1,044.51 ಕೋಟಿಗಳು ವೆಚ್ಚವಾಗಿರುತ್ತದೆ. ಸದರಿ ಕಾಮಗಾರಿಗಳಿಗೆ ಒಟ್ಟಾರೆ 4,384 ಕಿ.ಮೀ. ಉದ್ದದಲ್ಲಿ ರಸ್ತೆ ಪುನಃಸ್ಥಾಪನೆ ಮಾಡಬೇಕಾಗಿದ್ದು, ಈ ಪೈಕಿ 2,960 ಕಿ.ಮೀ. ಉದ್ದವನ್ನು ಸಾಧಿಸಲಾಗಿದ್ದು, ಬಾಕಿ 1,424 ಕಿ.ಮೀ. ಉದ್ದದಲ್ಲಿ ಪುನಃಸ್ಥಾಪನೆ ಮಾಡಬೇಕಾಗಿರುತ್ತದೆ.

ಪ್ರಾರಂಭಿಕವಾಗಿ ಜಿಲ್ಲೆಗಳಲ್ಲಿನ ಎಲ್ಲಾ ಜನವಸತಿಗಳಿಗೆ SVS ಗಳಡಿ ನೀರನ್ನು ಒದಗಿಸಲು ಉದ್ದೇಶಿಸಲಾಗಿರುವುದರಿಂದ Borewell ಗಳ ಮೂಲಕ ನೀರನ್ನು OHT ವರೆಗು ಸರಬರಾಜು ಮಾಡಲಾಗುತ್ತಿರುತ್ತದೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಸುಸ್ಥಿರ ಜಲ ಮೂಲಗಳಿಂದ ನೀರು ಪಡೆಯಲು ವಿನ್ಯಾಸಗೊಳಿಸಿ ಹಂತ ಹಂತವಾಗಿ ಅನುಷ್ಠಾನ ಮಾಡಲಾಗುತ್ತಿರುವುದರಿಂದ ಇವುಗಳು ಪೂರ್ಣಗೊಂಡ ನಂತರ ಸುಸ್ಥಿರ ಮೇಲ್ಮೈ ಜಲಮೂಲಗಳಿಂದ OHT ವರೆಗೂ ನೀರು ಸರಬರಾಜು ಮಾಡಲಾಗುವುದು.

JJM ಯೋಜನೆಯಡಿ ಕೈಗೆತ್ತಿಕೊಂಡ ಎಲ್ಲಾ ಕಾಮಗಾರಿಗಳನ್ನು ಮಾರ್ಚ್-2026 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

(ಪ್ರಿಯಾಂಕ್ ಖರ್ಗೆ)
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್**
**ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು**